# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು–572 103

ಸಂಖ್ಯೆ: ತುವಿ: ಡಿಇವಿ–02:2025–26/2024

ದಿನಾಂಕ:25.09.2025

## ಸುತ್ತೋಲೆ

**ವಿಷಯ: ಕರ್ನಾಟಕ ಸರ್ಕಾರದ 'ದೀಪಿಕಾ' ಯೋಜನೆಯಡಿಯಲ್ಲಿ ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸುವ ಕುರಿತು.**

ಉಲ್ಲೇಖ:1. ವಿವಿ ಸುತ್ತೋಲೆ ಸಂಖ್ಯೆ: ತುವಿ: ಡಿಇವಿ–02:2025–26/ದಿನಾಂಕ:24.09.2025

2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ:ಕಾಸಿಇ/29/Azim Prem Sch/2025/ವಿವೇ ಪತ್ರ ದಿನಾಂಕ:22.09.2025
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:25.09.2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01)ರ ಪತ್ರದಲ್ಲಿ ತಿಳಿಸಿರುವಂತೆ, ಕರ್ನಾಟಕ ಸರ್ಕಾರ 2025–26ನೇ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಂಜಿ ಫೌಂಡೇಷನ್ ಸಹಯೋಗದಲ್ಲಿ **"ದೀಪಿಕಾ"** ಯೋಜನೆಯಡಿಯಲ್ಲಿ **"ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನ"** ವನ್ನು ಅನುಷ್ಠಾನಗೊಳಿಸಲು ಉನ್ನತ ಶಿಕ್ಷಣ ಇಲಾಖೆಯು ಅಜೀಮ ಪ್ರೇಮ್‌ಜೀ ಫೌಂಡೇಷನ್‌ನೊಂದಿಗೆ ದಿನಾಂಕ:19.09.2025 ರಂದು ಒಡಂಬಡಿಕೆಯನ್ನು ಮಾಡಿಕೊಂಡಿರುತ್ತದೆ. ಪ್ರಸ್ತುತ 2025–26ನೇ ಸಾಲಿನಲ್ಲಿ ಪ್ರಥಮ ಪದವಿ/ಡಿಪ್ಲೋಮಾ ತರಗತಿಗೆ ದಾಖಲಾಗಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿನಿಯರು ಸದರಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಆಯ್ಕೆಯಾಗುವ ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ.30,000/–ಗಳ ವಿದ್ಯಾರ್ಥಿವೇತನ ಮಂಜೂರಾತಿ ಇದ್ದು, ಅರ್ಜಿಗಳನ್ನು ದಿನಾಂಕ;30.09.2025ರೊಳಗೆ ಪತ್ರದಲ್ಲಿ ನೀಡಿರುವ ಲಿಂಕ್ (https://azimpremjifoundation.org/ ಮೂಲಕ ಅರ್ಜಿ ಸಲ್ಲಿಸಲು ಯೋಜನೆಗೆ ಸಂಬಂಧಿಸಿದ ಅರ್ಹತೆಗಳು ಮತ್ತು ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ವಿವರಣೆ ಕೈಪಿಡಿಯನ್ನು ಲಗತ್ತಿಸಿ ತಿಳಿಸಿರುತ್ತಾರೆ.

ಈ ಸಂಬಂಧ ಉಲ್ಲೇಖಿತ ಪತ್ರದಲ್ಲಿನ ಮಾರ್ಗಸೂಚಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ವಿದ್ಯಾರ್ಥಿನಿಯರು ಮಾರ್ಗಸೂಚಿಯನ್ವಯ **"ದೀಪಿಕಾ"** ಯೋಜನೆಯಡಿಯಲ್ಲಿ **"ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನ"** ವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ.

**ಆದೇಶದ ಮೇರೆಗೆ**

**ಉಪಕುಲಸಚಿವರು**

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

**ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ/ಸಂಯೋಜಿತ ಕಾಲೇಜುಗಳು, ತುವಿತು.**

**ಪ್ರತಿಗಳು:**

1. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಸ್.ಎಸ್.ಪಿ ನೋಡಲ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ಗಣಕಯಂತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಈ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ–ಮೇಲ್ ಮೂಲಕ ಕಳುಹಿಸಲು ಸೂಕ್ತ ಕ್ರಮವಹಿಸುವುದು.
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುವಿತು.
5. ಕಚೇರಿ ಪ್ರತಿ.

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/29/Azim Prem Sch/2025-26/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು,ದಿನಾಂಕ:22.09.2025.

ಇವರಿಗೆ:

1. ಕರ್ನಾಟಕ ರಾಜ್ಯದ
   ಎಲ್ಲಾ ವಿಶ್ವವಿದ್ಯಾಲಯಗಳ
   ಕುಲಪತಿಗಳಿಗೆ,
2. ವೈದ್ಯಕೀಯ, ಕೃಷಿ, ಕಾನೂನು, ಮೀನುಗಾರಿಕೆ,
   ತೋಟಗಾರಿಕೆ ಮತ್ತು ಗ್ರಾಮೀಣಾಭಿವೃದ್ಧಿ
   ಇಲಾಖೆಯಡಿಯ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ

**ವಿಷಯ:** ಕರ್ನಾಟಕ ಸರ್ಕಾರದ "ದೀಪಿಕಾ" ಯೋಜನೆಯಡಿಯಲ್ಲಿ ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸುತ್ತಿರುವ ಬಗ್ಗೆ.

**ಉಲ್ಲೇಖ:** ಅಜೀಂ ಪ್ರೇಮಜೀ ಫೌಂಡೇಷನ್ ರವರಿಂದ ಹೊರಡಿಸಲಾಗಿರುವ ಕರಪತ್ರ ಹಾಗೂ ದಿನಾಂಕ:19.09.2025 ರಂದು ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಂಜೀ ಫೌಂಡೇಷನ್‌ನೊಂದಿಗೆ ಆದ ಒಡಂಬಡಿಕೆಯಂತೆ.

*****

ಉನ್ನತ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿನಿಯರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ಕಡಿಮೆ ಮಾಡಲು ವಿದ್ಯಾರ್ಥಿವೇತನ ನೀಡುವ ಮೂಲಕ ಹೆಣ್ಣು ಮಕ್ಕಳನ್ನು ಆರ್ಥಿಕ ಸಬಲೀಕರಣಗೊಳಿಸಿ, ಅಸಮಾನತೆಯನ್ನು ತಗ್ಗಿಸಿ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಒದಗಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ 2025-26 ನೇ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಂಜಿ ಫೌಂಡೇಷನ್ ಸಹಯೋಗದಲ್ಲಿ **"ದೀಪಿಕಾ"** ಯೋಜನೆಯಡಿಯಲ್ಲಿ **"ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನ"** ವನ್ನು ಅನುಷ್ಠಾನಗೊಳಿಸಲು ಉನ್ನತ ಶಿಕ್ಷಣ ಇಲಾಖೆಯು ಅಜೀಂ ಪ್ರೇಮ್‌ಜೀ ಫೌಂಡೇಷನ್‌ನೊಂದಿಗೆ **ದಿನಾಂಕ:19.09.2025ರಂದು** ಒಡಂಬಡಿಕೆಯನ್ನು ಮಾಡಿಕೊಂಡಿರುತ್ತದೆ. ಪ್ರಸ್ತುತ 2025-26 ನೇ ಸಾಲಿನಲ್ಲಿ ಪ್ರಥಮ ಪದವಿ/ ಡಿಪ್ಲೊಮಾ ತರಗತಿಗೆ ದಾಖಲಾಗಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿನಿಯರು ಸದರಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಆಯ್ಕೆಯಾಗುವ ವಿದ್ಯಾರ್ಥಿನಿಯರಿಗೆ ವಾರ್ಷಿಕ ರೂ.30,000/-ಗಳ ವಿದ್ಯಾರ್ಥಿವೇತನ ಮಂಜೂರಾತಿ ಇದ್ದು, ಅರ್ಜಿಗಳನ್ನು **ದಿನಾಂಕ:30.09.2025ರೊಳಗೆ** ಈ ಮುಂದಿನ ಲಿಂಕ್ https://azimpremjifoundation.org/ ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ.

Manjula (signature)

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

urgent 24/9/25

ಅಡಕ: ಸದರಿ ಯೋಜನೆಗೆ ಸಂಬಂಧಿಸಿದಂತೆ ಅರ್ಹತೆಗಳು ಮತ್ತು ಮಾರ್ಗ ಸೂಚಿಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಅನುಬಂಧ

ಅರ್ಜಿ ಸಲ್ಲಿಸಲು ವಿದ್ಯಾರ್ಥಿನಿಯರು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು:-

1. 10 ಮತ್ತು 12ನೇ ತರಗತಿಗಳನ್ನು (State/ICSE/ISE/CBSE) ಕಡ್ಡಾಯವಾಗಿ ಸರ್ಕಾರಿ ಶಾಲೆ ಮತ್ತು ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡಿರಬೇಕು.
2. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಸಂಬಂಧಿಸಿದ ಇಲಾಖಾ ವ್ಯಾಪ್ತಿಯ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪದವಿ/ಡಿಪ್ಲೊಮಾ ಕಾಲೇಜುಗಳಲ್ಲಿ ರೆಗ್ಯುಲರ್ ಪದವಿ ಕೋರ್ಸ್ ಗಳಿಗೆ ಪ್ರವೇಶ ಪಡೆದಿರಬೇಕು.
3. ಈಗಾಗಲೇ ಪದವಿ/ಡಿಪ್ಲೊಮಾ ಕೋರ್ಸುಗಳನ್ನು ಪೂರ್ಣಗೊಳಿಸಿ 2025-26ನೇ ಸಾಲಿನಲ್ಲಿ ಎರಡನೇ/ಹೆಚ್ಚಿನ ಪದವಿ/ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿನಿಯರು ಅರ್ಹರಿರುವುದಿಲ್ಲ.

## ವಿದ್ಯಾರ್ಥಿನಿಯರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಕಂಡ ಮಾರ್ಗ ಸೂಚಿಗಳನ್ನು ಅನುಸರಿಸುವುದು.

### ಭಾಗ-1

**ವಿದ್ಯಾರ್ಥಿನಿಯರ ನೊಂದಣಿ**

1. ಮೊಬೈಲ್ ಸಂಖ್ಯೆ (OTP ಆಧಾರಿತ ಪರಿಶೀಲನೆ)
2. ಮೊಬೈಲ್ ಸಂಖ್ಯೆ (OTP ಆಧಾರಿತ ಪರಿಶೀಲನೆ)
3. ಪೂರ್ಣ ಹೆಸರು (10ನೇ ತರಗತಿಯ ಅಂಕಪಟ್ಟಿಯಲ್ಲಿ ಇರುವಂತೆ)
4. 10 ನೇ ತರಗತಿಯನ್ನು ಪೂರ್ಣಗೊಳಿಸಿದ ಜಿಲ್ಲೆ ಮತ್ತು ರಾಜ್ಯದ ಹೆಸರು( ಅಂಕ ಪಟ್ಟಿಯಲ್ಲಿರುವಂತೆ)
5. ಆಧಾರ್ ಸಂಖ್ಯೆ ನಮೂದಿಸುವುದು ಮತ್ತು ದೃಢೀಕರಿಸುವುದು
6. ಪಾಸ್ ವರ್ಡ್ ಸೃಜನೆ ಮತ್ತು ದೃಢೀಕರಿಸುವುದು
7. ನೊಂದಣಿಯನ್ನು ಪೂರ್ಣಗೊಳಿಸಿದ ನಂತರ ಅರ್ಜಿದಾರರು ತಮ್ಮ User ID ಯನ್ನು ಅವರ ಮೊಬೈಲ್ ನಲ್ಲಿ ಸ್ವೀಕರಿಸುತ್ತಾರೆ.
8. ನಂತರ ಅರ್ಜಿ ಸಲ್ಲಿಸಲು User ID and Password ನೊಂದಿಗೆ ಲಾಗಿನ್ ಮಾಡುವುದು.

### ಭಾಗ-2

**ಅರ್ಜಿ ಸಲ್ಲಿಕೆಗೆ (ಅಗತ್ಯವಿರುವ ದಾಖಲೆಗಳು)**

1. ಪಾಸ್ ಪೋರ್ಟ್ ಅಳತೆಯ ಛಾಯಚಿತ್ರ
2. ಸಹಿ
3. ಆಧಾರ್ ಕಾರ್ಡ್
4. ಬ್ಯಾಂಕ್ ವಿವರಗಳು
5. 10 ನೇ ತರಗತಿಯ ಅಂಕಪಟ್ಟಿ
6. 12 ನೇ ತರಗತಿಯ ಅಂಕಪಟ್ಟಿ
7. ಕಾಲೇಜು ಪ್ರವೇಶ ಪುರಾವೆ

- ಸದರಿ ಯೋಜನೆಗೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಇಲಾಖೆಯು ಸಲ್ಲಿಸುವ ವಿಡಿಯೋಗಳು, ಕರಪತ್ರಗಳು ಹಾಗೂ ಇತರೆ ಸಾಮಗ್ರಿಗಳನ್ನು ಬಳಸಿ ವಿಶ್ವವಿದ್ಯಾಲಯ/ಕಾಲೇಜುಗಳ ಹಂತದಲ್ಲಿ ಪ್ರಚಾರ ಕೈಗೊಳ್ಳಲು ಹಾಗೂ ಈಗಾಗಲೇ ಕಾಲೇಜುಗಳ ಹಂತದಲ್ಲಿ ವಿದ್ಯಾರ್ಥಿವೇತನಕ್ಕೆ ನೇಮಕಗೊಂಡಿರುವ ಸಮನ್ವಯಾಧಿಕಾರಿಯನ್ನೇ ಸದರಿ ಯೋಜನೆಗೂ ನೇಮಿಸುವುದು.
- ವಿಶ್ವವಿದ್ಯಾಲಯ/ಕಾಲೇಜು ಹಂತದಲ್ಲಿ ಅರ್ಹ ವಿದ್ಯಾರ್ಥಿನಿಯರು ಅರ್ಜಿಗಳನ್ನು ಸಲ್ಲಿಸಲು KIOSK ಸೌಲಭ್ಯವನ್ನು (Computer, Internet, Scanner, Printer ಮತ್ತು Operator) ಒದಗಿಸುವುದು.

22/9/25



**ಶ್ರೀ ಸಿದ್ಧರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

Azim Premji Foundation



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ


## ಉನ್ನತ ಶಿಕ್ಷಣ ಇಲಾಖೆ
ಮತ್ತು
## ಅಜೀಂ ಪ್ರೇಮ್‌ಜಿ ಫೌಂಡೇಶನ್
ಸಹಯೋಗದೊಂದಿಗೆ
## ಕರ್ನಾಟಕ ರಾಜ್ಯದ ವಿದ್ಯಾರ್ಥಿನಿಯರಿಗಾಗಿ



**ಡಾ॥ ಎಂ.ಸಿ. ಸುಧಾಕರ್**
ಮಾನ್ಯ ಉನ್ನತ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ



**ಶ್ರೀ ಅಜೀಂ ಪ್ರೇಮ್‌ಜಿ**
ಮಾನ್ಯ ಅಧ್ಯಕ್ಷರು
ಅಜೀಂ ಪ್ರೇಮ್‌ಜಿ ಫೌಂಡೇಶನ್



# ದೀಪಿಕಾ
### ಉನ್ನತ ಶಿಕ್ಷಣ ವಿದ್ಯಾರ್ಥಿವೇತನ

ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ನೆರವು;
ನಾಡಿನೊಳಗೆ ಸಮೃದ್ಧಿಯ ಹರಿವು



## ರೂಪುರೇಷೆಗಳು:

- ಪ್ರತಿ ವರ್ಷ ರೂ.30,000/- ವಿದ್ಯಾರ್ಥಿವೇತನ
- ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ
- ಕೋರ್ಸ್ ಅವಧಿಯುದ್ದಕ್ಕೂ ಲಭ್ಯತೆ
- ವಿದ್ಯಾರ್ಥಿನಿಯರಿಗೆ ಆರ್ಥಿಕ ಬೆಂಬಲ-ಸಾಮಾಜಿಕ ನ್ಯಾಯ
- ವಿದ್ಯಾರ್ಥಿನಿಯರ ಸಬಲೀಕರಣ

## ಅರ್ಹತೆಗಳು:

- ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ 10 ಮತ್ತು 12ನೇ ತರಗತಿ (State/ICSE/ISC/CBSE) ವ್ಯಾಸಂಗ ಪೂರೈಸಿರಬೇಕು
- 2025-26ನೇ ಸಾಲಿನಲ್ಲಿ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರೆಗ್ಯುಲರ್ ಸಾಮಾನ್ಯ ಪದವಿ/ವೃತ್ತಿಪರ ಪದವಿ/ ಇತರ ಪದವಿ/ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರಬೇಕು

**ಹೆಚ್ಚಿನ ಮಾಹಿತಿಗಾಗಿ**
**ಈ ಲಿಂಕ್‌ಗೆ ಭೇಟಿ ಮಾಡಿ**

ಹೆಚ್ಚಿನ ವಿವರಗಳಿಗಾಗಿ ಮತ್ತು
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿ

**https://azimpremjifoundation.org** | **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಸೆಪ್ಟೆಂಬರ್ 2025**



Shri Siddaramaiah
Hon'ble Chief Minister
Government of Karnataka

Azim Premji Foundation

# Department of Higher Education
# And
# Azim Premji Foundation

**Collaboratively Institute Scholarship**




Shri D.K. Shivakumar
Hon'ble Deputy Chief Minister
Government of Karnataka

## FOR GIRL STUDENTS OF KARNATAKA STATE



Dr. M.C. Sudhakar
Hon'ble Minister for Higher Education
Government of Karnataka



# Deepika

**Higher Education Scholarship**

Lighting the Path for Leaders of Tomorrow



Shri Azim Premji
Hon'ble Chairman,
Azim Premji Foundation



## Features:

- A scholarship amount of Rs.30,000/- every year
- Encouragement to participate in Higher Education
- Scholarship available through course duration
- Financial Assistance & social equity to girl students
- Empowerment of girls



## Eligibility:

- Should have completed your 10th and 12th standard (State/ICSE/ISC/CBSE) in Government Institutions
- Should have taken admission in Government/ Private Aided/Private Education Institutions to pursue regular General Degree/Professional Degree/ Diploma during the year 2025-26

**Click on the Link**

**For Details and To Apply, Please Scan the QR**

**https://azimpremjifoundation.org** | **Last Date to Apply : 30th Sept 2025**